<u>1ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ</u>
<u>ಬೆಂಗಳೂರು ನಗರ</u>
ಸಿ.ಸಿ. ನಂ. 28510-2009

ಸಿಡಬ್ಲೂ -4 ಪಿಡಬ್ಲೂ- 1

| | |
|---|---|
| ಸಾಕ್ಷಿದಾರರ ಹೆಸರು | : ತಿರುಣವಕ್ಕರಸು |
| ತಂದೆಯ ಹೆಸರು | : ಬಲರಾಮನ್ |
| ವಯಸ್ಸು | : 52 ವರ್ಷ |
| ಕೆಲಸ | : ವ್ಯಾಪಾರ |
| ವಾಸ | : ಚಂದಾಪುರ, ಬೆಂಗಳೂರು |

<u>ಸಾಕ್ಷಿಯನ್ನು ದಿನಾಂಕಃ 28-02-2025 ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.</u>
<u>ಮುಖ್ಯ ವಿಚಾರಣೆ ಹಿ.ಸ.ಸಾ.ಅ. ರವರಿಂದಃ</u>

ನಾನು 1996 ರಿಂದ 2000 ಇಸವಿಯವರೆಗೆ ವಾಣಿ ನರ್ಸರಿ ಮತ್ತು ಕಿರಿಯ ಪ್ರಾಥಮಿಕ ಪಾಠಶಾಲೆ, ಲಗ್ಗೆರೆ ಇಲ್ಲಿ ಕೆಲಸ ಮಾಡಿರುತ್ತೇನೆ.

ನಾನು ಕೆಲಸ ಮಾಡುವ ಸಮಯದಲ್ಲಿ ಬಾಣಸವಾಡಿಯ ಮತ್ತು ಜೀವನ್ ಭೀಮನಗರದ ಎಸ್.ಬಿ.ಐ ಶಾಖೆಗಳಿಂದ ನಮ್ಮ ಶಾಲೆಯಲ್ಲಿ ಕೆಲಸ ಮಾಡುವ ಶಿಕ್ಷಕರಾದ 1ನೇ ಆರೋಪಿ ಆರ್.ಉಮಾ ರವರು ಸಾಲವನ್ನು ತೆಗೆದುಕೊಂಡಿರುತ್ತಾರೆ ಎಂಬ ಬಗ್ಗೆ ಪತ್ರ ಬಂದಿದ್ದವು. ಈ ರೀತಿ ಬೇರೆ ಬೇರೆ ಹೆಸರಿನಲ್ಲಿ ನಮ್ಮ ಶಾಲೆಯ ವಿಳಾಸಕ್ಕೆ ಬಂದಿದ್ದವು. ನಂತರ ಸುಮಾರು 10 ಬ್ಯಾಂಕ್ ಗಳಿಂದ ವ್ಯವಸ್ಥಾಪಕರು ಮತ್ತು ಪ್ರತಿನಿಧಿಗಳು ಬಂದು ನಮ್ಮ ಶಾಲೆಯನ್ನು ಪರಿಶೀಲನೆ ಮಾಡಿರುತ್ತಾರೆ. ಆದರೆ ಅವರು ಸಾಲ ತೆಗೆದುಕೊಂಡಿದ್ದಾರೆ ಎಂದು ಹೇಳಲಾದ ವ್ಯಕ್ತಿಗಳು ನಮ್ಮ ಶಾಲೆಯಲ್ಲಿ ಕೆಲಸ ಮಾಡುತ್ತಿರಲಿಲ್ಲ. ಈ ಕುರಿತು ಅವರಿಗೆ ಮಾಹಿತಿಯನ್ನು ನೀಡಿರುತ್ತೇನೆ. ನಂತರ ಸದರಿ ವ್ಯವಸ್ಥಾಪಕರು ಮತ್ತು ಪ್ರತಿನಿಧಿಗಳು ತಾವು ಉಮಾ ರವರ ಮೇಲಿನ ನಂಬಿಕೆಯಿಂದ ಸಾಲವನ್ನು ಕೊಟ್ಟಿರುತ್ತೇವೆ ಎಂದು ತಿಳಿಸಿದ್ದರು. ನಾನು ವಿವರಣೆಯನ್ನು ಕೇಳಿದಾಗ ಬ್ಯಾಂಕಿಗೆ ಬಂದು ಪಡೆದುಕೊಳ್ಳುವಂತೆ ತಿಳಿಸಿದ್ದರು.

ನಂತರ ನಾವು ಮಾಹಿತಿಯನ್ನು ಪಡೆದು ಆರ್.ಉಮಾರವರಿಗೆ ನೋಟೀಸನ್ನು ಕೊಟ್ಟಿರುತ್ತೇವೆ. ಆದರೆ ಉಮಾ ರವರು ನೋಟೀಸನ್ನು ತೆಗೆದುಕೊಳ್ಳದೇ ತಿರಸ್ಕರಿಸಿರುತ್ತಾರೆ. ನಂತರ ನಾವು ಅಂಚೆ ಮೂಲಕ ಕಳುಹಿಸಿದರೂ ಸಹ ಅದನ್ನು ತಿರಸ್ಕರಿಸಿರುತ್ತಾರೆ. ನಂತರ ಈ ಕುರಿತು ಸಂಬಂಧಪಟ್ಟ ಬಿ.ಇ.ಒ, ಡಿ.ಡಿ.ಪಿ.ಐ ಮತ್ತು ಡಿ.ಪಿ.ಐ ರವರಿಗೆ ಈ ಕುರಿತು ಪತ್ರವನ್ನು ಬರೆದಿರುತ್ತಾರೆ. ನಂತರ ನಾವು ವಕೀಲರ ಮೂಲಕ ಆರೋಪಿ ವಿರುದ್ಧ ಬೇರೆ ಬೇರೆ ರವರ ಹೆಸರಿನಲ್ಲಿ 1ನೇ ಆರೋಪಿಯು ಸಾಲವನ್ನು ಪಡೆದಿದ್ದಾರೆ ಎಂಬ ಬಗ್ಗೆ ದೂರನ್ನು ಸಲ್ಲಿಸಿರುತ್ತೇವೆ.

1ನೇ ಆರೋಪಿಯು ಯಾವ ಯಾವ ದಾಖಲೆಗಳನ್ನು ನೀಡಿ ಯಾವ ರೀತಿ ಸಾಲವನ್ನು ಪಡೆದಿದ್ದರು ಎಂದು ನನಗೆ ಗೊತ್ತಿಲ್ಲ. 1ನೇ ಆರೋಪಿಯು ತಾನೇ ಬೇರೆ ಬೇರೆ ವ್ಯಕ್ತಿಗಳ ಹೆಸರುಗಳನ್ನು ಉಪಯೋಗಿಸಿಕೊಂಡು, ಅವರು ತಮ್ಮ ಶಾಲೆಯಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದು ಹೇಳಿ ಸಾಲವನ್ನು ಪಡೆದಿದ್ದರು. ಈ ಎಲ್ಲಾ ವಿಚಾರಗಳನ್ನು ನಾನು ಹೇಳಿಕೆಯನ್ನು ಪೊಲೀಸರ ಮುಂದೆ ಹೇಳಿರುತ್ತೇನೆ.

(ಈ ಹಂತದಲ್ಲಿ ಸಾಕ್ಷಿದಾರರು ಭಾಗಶಃ ಪ್ರತಿಕೂಲ ಸಾಕ್ಷಿ ನುಡಿದಿದ್ದರಿಂದ, ಹಿ.ಸ.ಸಾ.ಅ. ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿದಾರರೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು)

<u>ಪಾಟೀ ಸವಾಲು ಹಿ.ಸ.ಸಾ.ಅ. ರವರಿಂದಃ</u>

1ನೇ ಆರೋಪಿಯು ಸಾಲ ಪಡೆದವರು ತಮ್ಮ ಮತ್ತು ಬೇರೆ ಬೇರೆ ಶಾಲೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದು ಹೇಳಿ ಆ ಕುರಿತು ವೇತನದ ಪ್ರಮಾಣ ಪತ್ರಗಳನ್ನು ಸೃಷ್ಟಿಮಾಡಿ, ಅವುಗಳನ್ನು ಹಾಜರುಪಡಿಸಿ ಸಾಲವನ್ನು ಪಡೆದಿದ್ದರು ಎಂದರೆ ಸರಿ. ಸದರಿ 1ನೇ ಆರೋಪಿ ತಮ್ಮ ತಂಗಿ 2ನೇ ಆರೋಪಿ ತಮ್ಮ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದಾರೆ ಎಂಬ ಬಗ್ಗೆ ದಾಖಲೆಯನ್ನು ಸೃಷ್ಟಿಮಾಡಿಕೊಂಡಿದ್ದರು ಎಂದರೆ ಸರಿ. ಅದೇ ರೀತಿ 1ನೇ ಆರೋಪಿಯು ದಾಖಲೆಗಳನ್ನು ಸೃಷ್ಟಿಮಾಡಿ ಎರಡು ಎರಡು ಬಾರಿ ಸಂಬಂಳಗಳನ್ನು ತೆಗೆದುಕೊಂಡಿದ್ದರು ಎಂದರೆ ಸರಿ. ಅದೇ ರೀತಿ 1ನೇ ಆರೋಪಿಯು ಗೀತಾ, ಲಲಿತಮ್ಮ,

ಲಕ್ಷ್ಮೀದೇವಿ ಮತ್ತು ಸುಮಾ ಎಂಬುವವರು ಕೆಲಸ ಮಾಡದಿದ್ದರೂ, ಅವರ ಹೆಸರಿನಲ್ಲಿ ವೇತವನ್ನು ಪಡೆದಿದ್ದರು ಎಂದರೆ ಸರಿ. 2000ನೇ ಇಸವಿಯ ಜನವರಿ, ಫೆಬ್ರವರಿ ಮತ್ತು ನವೆಂಬರ್ ತಿಂಗಳುಗಳಲ್ಲಿ ಎರಡು ಎರಡು ಬಾರಿ ವೇತನಗಳನ್ನು ಪಡೆದುಕೊಂಡಿದ್ದರು ಎಂದರೆ ಸರಿ.

<u>ಪಾಟೀ ಸವಾಲುಃ 2ನೇ ಆರೋಪಿಯ ಪರ ಶ್ರೀ ಕೆ.ಎ.ಪಿ ವಕೀಲರಿಂದಃ</u>

ನಾನು ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಿದ್ದೆ. ನಾನು ಕೆಲಸ ಮಾಡುತ್ತಿದ್ದ ಸಮಯದಲ್ಲಿ ಯಾವುದೇ ರೆಮ್ಯೂನರೇಷನ್ ಪಡೆದಿರುವುದಿಲ್ಲ. ನಾನು 1996 ರಿಂದ 2000 ನೇ ಇಸವಿಯ ಎಲ್ಲಾ ಹಣಕಾಸಿನ ವ್ಯವಹಾರದ ದಾಖಲೆಗಳ ಬಗ್ಗೆ ಹೇಳಬಲ್ಲೆ. ನಮ್ಮ ಸಂಸ್ಥೆಯು 1974 ರಲ್ಲಿ ಸ್ಥಾಪನೆಯಾಗಿರುತ್ತದೆ. ನನ್ನನ್ನು ಸಂಸ್ಥೆಯ ನಿರ್ದೇಶಕರು ನೇಮಕ ಮಾಡಿಕೊಂಡಿದ್ದರು. 1ನೇ ಆರೋಪಿಯು ತೆಗೆದುಕೊಂಡ ಸಾಲವನ್ನು ಪಾವತಿ ಮಾಡಿರುವುದಿಲ್ಲ ಎಂಬ ಬಗ್ಗೆ ಪತ್ರವನ್ನು ನಾನು ಪಡೆದಿದ್ದೆ. ಸದರಿ ದಾಖಲೆಯನ್ನು ಪೊಲೀಸರಿಗೆ ನೀಡಿರುತ್ತೇನೆ. ನಾನು ಸದರಿ ಪತ್ರಗಳನ್ನು ಅಂಚೆ ಮೂಲಕ ಪಡೆದುಕೊಂಡಿದ್ದೆ. ಕೆಲವು ಪತ್ರಗಳನ್ನು ನೇರವಾಗಿ ಪಡೆದಿದ್ದೆ. ಸದರಿ ಪತ್ರಗಳನ್ನು ನಮ್ಮ ಶಾಲೆಯ ಹೆಸರಿಗೆ ಕೊಟ್ಟಿದ್ದರು. ಸದರಿ ವಿಚಾರವನ್ನು ನಮ್ಮ ನಿರ್ದೇಶಕರಿಗೆ ನಾನು ತಿಳಿಸಿರುತ್ತೇನೆ. ಈ ವಿಚಾರವಾಗಿ ನಾನು 1ನೇ ಆರೋಪಿಯನ್ನು ವಿಚಾರಣೆ ಮಾಡಿರುತ್ತೇನೆ. ಆ ಬಗ್ಗೆ ದಾಖಲೆಗಳನ್ನು ಸಹ ವಿಚಾರಣೆ ಮಾಡಿರುತ್ತೇವೆ. ಸದರಿ ದಾಖಲೆಗಳನ್ನು ನಾನು ಪೊಲೀಸರಿಗೆ ನೀಡಿರುತ್ತೇನೆ. ವಿಚಾರಣೆಗೆ ಬಂದ 10 ಬ್ಯಾಂಕ್ ಗಳ ಪೈಕಿ 2 ಎಸ್.ಬಿ.ಐ, 1 ಕಾರ್ಪೋರೇಷನ್ ಬ್ಯಾಂಕ್, 1 ಸಿಂಡಿಕೇಟ್ ಬ್ಯಾಂಕ್, 1 ಆರ್.ಕೆ.ಡಿ ಫೈನಾನ್ಶಿಯಲ್ ಬ್ಯಾಂಕ್, 1 ಬಾವಕ್ಷತ್ರಿಯ ಬ್ಯಾಂಕ್ ಮತ್ತು 2 ಹಣಕಾಸಿನ ಸಂಸ್ಥೆಗಳು ಹೊಂದಿದ್ದವು. ಸದರಿ ಬ್ಯಾಂಕ್ ನವರು ಸ್ವತಃ ತಾವೇ ವಿಚಾರಣೆಗಾಗಿ ಬಂದಿದ್ದರು. ಸದರಿ ಬ್ಯಾಂಕಿನವರ ಪೈಕಿ ಎಸ್.ಬಿ.ಐ ನವರು ಮಾತ್ರ ನಮ್ಮ ಶಾಲೆಗೆ ಬಂದಾಗ ನಮ್ಮವರಿಂದ ಹೇಳಿಕೆಯನ್ನು ಪಡೆದಿರುತ್ತಾರೆ. ಆ ಬಗ್ಗೆ ದಾಖಲೆಗಳನ್ನು ಹಾಜುರಪಡಿಸುತ್ತೇನೆ.

2ನೇ ಆರೋಪಿಯು ಸಂಸ್ಥೆಯಲ್ಲಿ ಕೆಲಸವನ್ನು ಮಾಡುತ್ತಿರಲಿಲ್ಲ. ನನ್ನ ಹೇಳಿಕೆಯನ್ನು ಬರವಣಿಗೆಯಲ್ಲಿ ನೀಡಿರುತ್ತೇನೆ. 1ನೇ ಆರೋಪಿಯು 2ನೇ ಆರೋಪಿ ಹೆಸರಿನಲ್ಲಿ ದಾಖಲೆ ಸೃಷ್ಟಿಸಿದ್ದಾರೆ ಎಂದು ನಾನು ಹೇಳಿಕೆಯನ್ನು ನೀಡಿರುತ್ತೇನೆ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ವಿಚಾರಗಳು ಗೊತ್ತಿಲ್ಲದೇ ಇದ್ದರೂ ನಮ್ಮ ನಿರ್ದೇಶಕರ ಮಾತುಗಳನ್ನು ಕೇಳಿಕೊಂಡು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆರೋಪಿತರನ್ನು ಈ ಮೊದಲು ನೋಡಿರುವುದಿಲ್ಲ.

<u>ಮರುವಿಚಾರಣೆಃ</u>

ನಾನು 1996 ರಿಂದ 2000 ಇಸವಿಯವರೆಗೆ ವಾಣಿ ನರ್ಸರಿ ಮತ್ತು ಕಿರಿಯ ಪ್ರಾಥಮಿಕ ಪಾಠಶಾಲೆ, ಲಗ್ಗೆರೆ ಇಲ್ಲಿ ಕೆಲಸ ಮಾಡಿರುತ್ತೇನೆ ಎಂದು ಹೇಳಿದ್ದು, ಆದರೆ 1996 ರಿಂದ 2002 ನೇ ಇಸವಿಯವರೆಗೆ ಕೆಲಸ ಮಾಡಿರುತ್ತೇನೆ.

<u>ಪಾಟೀ ಸವಾಲುಃ 2ನೇ ಆರೋಪಿಯ  ಪರ ಶ್ರೀ ಕೆ.ಎ.ಪಿ ವಕೀಲರಿಂದಃ</u>

ನಾನು ಪುನಃ ನೆನಪಿಸಿಕೊಂಡು 1996 ರಿಂದ 2002 ಎಂದು ಹೇಳಿರುತ್ತೇನೆ ಎಂದರೆ ಸರಿ.

<u>ಪಾಟೀ ಸವಾಲುಃ 3ನೇ ಆರೋಪಿಯ  ಪರ ಶ್ರೀ ವಿ.ಬಿ.ಹೆಚ್ ವಕೀಲರಿಂದಃ ಇಲ್ಲ</u>

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಓದಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಯಿತು.)

ಓ ಹೇ ಕೇ ಸ ಇ ಒ

1 ನೇ ಅ. ಮು. ನ್ಯಾ.ದಂ. ನ್ಯಾ